## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ.4/2018

ಅ.ಸಾ : **6**
ದೋಸಾ : **8**

| | | |
|---|---|---|
| ಸಾಕ್ಷಿದಾರರ ಹೆಸರು | : | ಮನೋಹರ ಕೊಠಗಿಮನಿ |
| ತಂದೆಯ ಹೆಸರು | : | ಮಲ್ಲಪ್ಪ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಹೆಸ್ಕಾಂ |
| ವಾಸ ಸ್ಥಳ | : | ಹೊನ್ನಾಳಿ |

ದಿನಾಂಕಃ**04/07/2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –**

1 ನಾನು 2010 ರಿಂದ 2023 ರವರೆಗೆ ನಾನು ಶಿಗ್ಗಾಂವಿಯ ಲೋಕೋಪಯೋಗಿ ಇಲಾಖೆಯ ಎ.ಇ. ಎಂದು ಕೆಲಸ ಮಾಡಿದ್ದೇನೆ. ನನ್ನ ಅವಧಿಯಲ್ಲಿ ನೋಡಿದ ಮತ್ತು ನೀಡಿದ ದಾಖಲೆಗಳನ್ನು ತೋರಿಸಿದರೆ ಗುರುತಿಸುತ್ತೇನೆ. ಈಗ ತೋರಿಸಿದ 2 ನಕ್ಷೆಗಳ ಮೇಲೆ ನನ್ನ ಸಹಿ ಇದ್ದು ನಕ್ಷೆಗಳನ್ನು ನಿಪಿ -36 ಮತ್ತು 37 ಎಂದು ಗುರುತಿಸಲಾಯಿತು. ದಿನಾಂಕ 09.08.2017 ರಂದು ಮಹದೇವಪ್ಪ ಸುಣಗಾರ ಎನ್ನುವವರೊಂದಿಗೆ ನಿಪಿ-36 ಮತ್ತು 37 ರಲ್ಲಿ ನಮೂದು ಮಾಡಿದ ಜಾಗೆಗಳಿಗೆ ಹೋಗಿ ಪರಿಶೀಲಿಸಿ ನಕ್ಷೆ ತಯಾರಿಸಿದ್ದೇನೆ. ಜಾಗೆಯನ್ನು ಪರಿಶೀಲಿಸಿ ನಕ್ಷೆ ತಯಾರಿಸಿ ನಮ್ಮ ಕಛೇರಿಗೆ ಪೊಲೀಸರ ಮನವಿ ಬಂದಿತ್ತು. ಮನವಿಯನ್ನು ನಿಪಿ -38 ಎಂದು ಗುರುತಿಸಲಾಯಿತು. ಒಂದು ನಕ್ಷೆ ಬಂಕಾಪುರ ಹೆಸ್ಕಾ, ಕಾರ್ಯಾಲಯಕ್ಕೆ ಇನ್ನೊಂದು 2 ನೇ ಆರೋಪಿ ಮನೆಗೆ ಸಂಬಂಧಿಸಿದ್ದು ಇರುತ್ತದೆ.

**ಪಾಟೀ ಸವಾಲುಃ 1 ನೇ ಆರೋಪಿ ಪರಃ ಶ್ರೀ ಯು.ಎನ್.ಜಿ. ವಕೀಲರಿಂದಃ–**

2. ನಾನು ಯಾವುದೇ ಜಾಗೆಯನ್ನು ಪರಿಶೀಲಿಸದೇ ಕಾರ್ಯಾಲಯದಲ್ಲಿ ಕುಳಿತು ನಿಪಿ-36 ಮತ್ತು ನಿಪಿ-37 ನ್ನು ಪೊಲೀಸರಿಗೆ ಅನುಕೂಲವಾಗುವಂತೆ ತಯಾರಿಸಿ ಕೊಟ್ಟು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ  ಅನ್ನುವುದು ಸುಳ್ಳು. ನಕ್ಷೆಗಳು ಅಳತೆಗನುಗುಣವಾಗಿ ಇಲ್ಲ ಅನ್ನುವುದು ನಿಜ. ನಾನು ನಕ್ಷೆಗಳೊಂದಿಗೆ ಟಿಪ್ಪಣಿ ಪೂರೈಸಿಲ್ಲ. ನಕ್ಷೆಗೆ ಮಹದೇವಪ್ಪ ಎನ್ನುವವರ ಸಹಿಯನ್ನು ಪಡೆದಿಲ್ಲ ಅನ್ನುವುದು ನಿಜ.

ಮರುಹೇಳಿಕೆಃ ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.